ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
ಸಿಸಿ ನಂಃ **1055/ 2025**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ. ಪೃಥ್ವಿರಾಜ್ | ಡಿ.ಡಬ್ಲೂ 01 |
| ತಂದೆ ಹೆಸರುಃ | ವೀರನಗೌಡ | |
| ವಯಸ್ಸುಃ | 62 ವರ್ಷ | ದಿಃ 17-07-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಕೆ ಬಿ ಎ ವಕೀಲರಿಂದಃ

ದೂರುದಾರ ನನ್ನ ಗೆಳೆಯ ಆಗಿದ್ದು ನನಗೆ 7-8 ವರ್ಷಗಳಿಂದ ಅವರ ಪರಿಚಯ ಇದೆ. ನಾನು ಈಗ ಸುಮಾರು 2-3 ವರ್ಷಗಳ ಹಿಂದೆ ದೂರುದಾರನಿಂದ ರೂ. 5 ಲಕ್ಷ ಬಡ್ಡಿ ಸಾಲವನ್ನು ಪಡೆದುಕೊಂಡಿದ್ದೆನು. ಸದರಿ ಸಾಲದ ಭದ್ರತೆಗಾಗಿ ನಾನು ದೂರುದಾರನಿಗೆ ನನ್ನ ಖಾತೆಯ 5 ಚೆಕ್ಕಗಳನ್ನು ಕೊಟ್ಟಿದ್ದೆನು. ನಂತರ ಒಂದು ವರ್ಷದೊಳಗೆ ನಾನು ಸದರಿ ಸಾಲವನ್ನು ದೂರುದಾರರ ಖಾತೆಗೆ ಆರ್ ಟಿ ಜಿ ಎಸ್ ಮೂಲಕ ಮರುಪಾವತಿ ಮಾಡಿದ್ದೆನು. ನಾನು ದೂರುದಾರರಿಗೆ ಬಡ್ಡಿ ಪಾವತಿ ಮಾಡುತ್ತಾ ಹೋಗಿದ್ದೆನು ಆ ನಂತರ ಅಸಲು ರೂ. 5 ಲಕ್ಷವನ್ನು ಆರ್ ಟಿ ಜಿ ಎಸ್ ಮೂಲಕ ಪಾವತಿ ಮಾಡಿದ್ದೆನು. ನಾನು ಸಾಲ ಮರುಪಾವತಿ ಮಾಡಿದ ನಂತರ ನನ್ನ ಚೆಕ್ಕಗಳನ್ನು ಮರಳಿ ನೀಡುವಂತೆ ಕೇಳಿದಾಗ ದೂರುದಾರ ನಂತರ ಕೊಡುವುದಾಗಿ ತಿಳಿಸಿದ್ದರು. ಆದರೆ ಆ ನಂತರ ನನ್ನ ಚೆಕ್ಕಗಳನ್ನು ಆತ ದುರುಪಯೋಗ ಮಾಡಿಕೊಂಡು ನನ್ನ ವಿರುದ್ಧ ಈ ಪ್ರಕರಣ ದಾಖಲು ಮಾಡಿದ್ದಾರೆ.

02. ಸರ್ವೆ ನಂ.152, 183, 187 ಮತ್ತು 188 ರ ಜಮೀನುಗಳು ನಮ್ಮ ಹಿರಿಯರ ಆಸ್ತಿಗಳಾಗಿದ್ದು ಅವುಗಳನ್ನು ನಮ್ಮ ಹಿರಿಯರು ಹಿಂದೆಯೇ ಮಾರಾಟ ಮಾಡಿದ್ದರೂ ಸಹ ಖಾತೆ ಮಾತ್ರ ನಮ್ಮ ಹೆಸರಿಗೆ ವರ್ಗಾವಣೆ ಆಗಿರುತ್ತದೆ. ಸದರಿ ಜಮೀನುಗಳಿಗೂ ಹಾಗು ನನಗೂ ಯಾವುದೇ ಸಂಬಂಧ ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ, ಯಾದಗಿರಿ.